## Questions for Answers on the Day
## (but not taken up)

### Appointment of Assistant Director of Industries

*Q.—119. SMT. B. L. SUBBAMMA (Chickmagalur).—

Will the Government be pleased to state :—

(*a*) whether there is any proposal before the Government to appoint Assistant Director of Industries to Chickmagalur District ;

(*b*) when the said appointment would be made ?

*A.*—SRI K. MALLAPPA (Minister for Industries and Commerce).—

(*a*) Yes.

(*b*) The appointment will be made shortly.

---

### Tanks newly constructed

*Q.—222. SRI M. N. KRISHNA SINGH (Jagalur).—

Will the Government be pleased to state :—

(*a*) the number of tanks that have been newly constructed in Chitradurga District during the year 1962-63 (Talukwise information may be given).

(*b*) the estimated cost of each of the said tanks ?

*A.*—SRI ALUR HANUMANTHAPPA (Deputy Minister for Minor Irrigation).—

(*a*) Nil.

(*b*) Does not arise.

---

### Decisions of the High Court and the Supreme Court

*Q.—243. SRI V. S. PATIL (Belgaum—I).—

Will the Government be pleased to state :—

(*a*) What steps Government had taken on the full-bench Decision of the Mysore High Court dated 16th March 1962 in the case of Rachaganda G. Patil *vs* Kamabai and others in view of the recent decision on that point by the Supreme Court of India ;

(*b*) if no steps were taken, why not ?

*A.*—SRI M. V. KRISHNAPPA (Minister for Revenue).—

(*a*) It is not necessary for Government to take any action. The decisions of the High Court and the Supreme Court will be cited by Counsel when they argue in an individual case before the concerned officers. The officers are aware that the decisions of the Supreme Court and the High Court should be followed.

(*b*) In view of the answer to part (*a*), this does not arise.

---

## Statement of Smt. Yashodara Dasappa

**Re** : *Her Resignation as Minister for Social Welfare.*

†ಶ್ರೀಮತಿ ಯಶೋಧರಾ ದಾಸಪ್ಪ (ಪಾಸನ).—ಸ್ವಾಮಿ, ನಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವ ಉದ್ದೇಶ ಮತ್ತು ಅದರ ಪರಿಣಾಮ ಏನು ಎಂದು ಕೇಳತಕ್ಕ ಕುತೂಹಲ ಈ ಸಭೆಯ ಸದಸ್ಯರಿಗೆ ಹೆಚ್ಚಿಗೆ ಇದ್ದುದರಿಂದಲೂ, ತಾವು ನನಗೆ ಅನುಮತಿ ಕೊಟ್ಟು ಆ ವಿಷಯ ಹೇಳಬಹುದು ಎಂದ ಮೇಲೆ ಆ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸಬೇಕೆಂದು ಇಲ್ಲಿ ನಿಂತಿದ್ದೇನೆ.

ಸ್ವಾಮಿ, ಎಲ್ಲರಿಗೂ ಗೊತ್ತಿದ್ದ ಹಾಗೆ ಅನೇಕ ಸಲ, ಸಭೆಯಲ್ಲಿಯೂ ಹೊರಗೂ ಈ ತತ್ವದ ಮೇಲೆ ನನ್ನ ನಿಲುವು ಏನು ಎನ್ನುವುದನ್ನು ಬಹಿರಂಗವಾಗಿ ಹೇಳಿದೆ. ಯಾವಾಗ ಕಾಲ ಸನ್ನಿವೇಶ ಅದಕ್ಕೆ ಸಕಾರಣವಾಗಿ ದೊರಕುತ್ತದೆಯೋ, ಆಗ ಒಂದು ತತ್ವದ ಮೇಲೆ ಯಾವ ನಿರ್ಧಾರಕ್ಕೆ ಬರಬೇಕು ಎನ್ನುವಂಥಾದ್ದು ವ್ಯಕ್ತಿಗತವಾದ ಪಕ್ಕು ಗಾಂಧೀಜಿಯವರು ಸ್ವಾತಂತ್ರ್ಯವನ್ನು ನಮಗೆ ದೊರಕಿಸಿಕೊಡುವುದಕ್ಕೆ ಮುನ್ನ, ಅನೇಕ ಪವಿತ್ರವಾದ ಕಾರ್ಯಕ್ರಮಗಳನ್ನು ಈ ಕಾಂಗ್ರೆಸ್ಸಿನ ಮಹಾ ಸಂಸ್ಥೆಗೆ ಹಾಕಿಕೊಟ್ಟಿದ್ದರು. ಆ ತತ್ವಗಳನ್ನು ಚಾಚೂ ತಪ್ಪದೆ, ಭಕ್ತಿಯಿಂದ ಅನೇಕ ನಾಯಕರು ಅವರ ನೇತೃತ್ವದಲ್ಲಿ ಅನುಷ್ಠಾನಕ್ಕೆ ತಂದು ಈ ದೇಶಕ್ಕೆ ಈ ಸ್ವಾತಂತ್ರ್ಯವನ್ನು ಗಳಿಸಿಕೊಡುವ ಒಂದು ಅವಕಾಶ ಬಂತು. ಈ ರೀತಿಯಾಗಿಂಥ ಒಂದು ಪವಿತ್ರವಾದ ಮನೋಭಾವನೆ ನಮ್ಮನ್ನು ಆಳುತ್ತಿದ್ದ ಬ್ರಿಟಿಷರ ಮೇಲೂ ಇಡೀ ಪ್ರಪಂಚದ ಮೇಲೂ ಪರಿಣಾಮಕಾರಿಯಾಗಿ ಪರಿಣಮಿಸಬೇಕಾಗಿದ್ದರೆ ಇದು ಮಹಾ ಸಿದ್ಧಾಂತದ ಮೇಲೆ ಅವಲಂಭಿಸಿತು ಎಂದು ಹೇಳುವುದರಲ್ಲಿ ಸಂಶಯವಿಲ್ಲ. ಜನರು ಜಗತ್ತಿನಲ್ಲಿ ಪಾವಿತ್ರ್ಯತೆಯಿಂದ ಯಾವುದಾದರೂ ಸಾಧಿಸಬಹುದು ಎನ್ನುವುದನ್ನು ಮಹಾತ್ಮಾ ಗಾಂಧಿಯವರು ತೋರಿಸಿಕೊಟ್ಟಿದ್ದಾರೆ. ಅದರಲ್ಲಿ ಸಂಪೂರ್ಣ ಸಂಬಿಕೆ ಕೆಲವರಿಗೆ ಕೆಲವು ತತ್ವಗಳಲ್ಲಿ ಇರಬಹುದು. ಅವರಂತೆ ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಹಳ್ಳಿಗಾಡಿನಲ್ಲಿ ರಚನಾತ್ಮಕ ಕಾರ್ಯಗಳನ್ನು ಮಾಡತಕ್ಕದ್ದು, ನನ್ನ ಮನಸ್ಸಿಗೆ ಬಹಳ ಹಿತವಾದ ವಿಷಯ ಆಗಿದ್ದು ದರಿಂದ 30 ವರ್ಷದಿಂದ, ಒಂದಲ್ಲ ಒಂದು ರೀತಿಯಲ್ಲಿ ಆ ಕೆಲಸದಲ್ಲಿ ನಾನು ಭಾಗಿಯಾಗಿದ್ದೆ. ಗಾಂಧೀಜಿಯವರು ಪ್ರೊಹಿಬಿಷನ್ ವಿಚಾರದಲ್ಲಿ ಹೇಳಿರತಕ್ಕಂಥ ವಿಷಯಗಳನ್ನು ನಾನು ಇಲ್ಲಿ ಹೇಳಿ, ಈ ಸಭೆಯ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಕೇವಲ 5-6 ಮುಖ್ಯವಾದ ವಿಷಯಗಳನ್ನು ಅವರ ಮಾತಿನಲ್ಲಿ ಹೇಳಿ, ಮುಂದೆ ನನ್ನ ರಾಜೀನಾಮೆಯ ಕಾರಣವನ್ನು ತಿಳಿಸುತ್ತೇನೆ. ಗಾಂಧೀಜಿಯವರು ಪ್ರೊಹಿಬಿಷನ್ ವಿಚಾರದಲ್ಲಿ ಹೀಗೆ ಹೇಳಿದ್ದಾರೆ :

> "I would rather have India reduced to a state of pauperism than have thousands of drunkards in our midst. I would rather have India without education if that is the price to be paid for making it dry".

ಇದನ್ನು ಅವರು 1927ರಲ್ಲಿ "ಯಂಗ್ ಇಂಡಿಯಾ"ದಲ್ಲಿ ಹೇಳಿದ್ದಾರೆ. ಇನ್ನೊಂದು ಸಲ ಅವರು ಹೇಳಿದ್ದಾರೆ;

> "Nothing but ruin stares a nation in the face that is a prey to the drink habit. History records that empires have been destroyed through that habit. We have it in India that the great community to which Shri Krishna belonged was ruined by that habit. This monstrous evil was undoubtedly one of the contributory factors in the fall of Rome".

(ಶ್ರೀಮತಿ ಯಶೋಧರಾ ದಾಸಪ್ಪ)

1930ನೆಯ ಇಸವಿಯಲ್ಲಿ ಯಂಗ್ ಇಂಡಿಯಾದಲ್ಲಿ ಈ ರೀತಿ ಬರೆದಿದ್ದಾರೆ:

"Drink and drugs sap the moral well-being of those who are given to this habit. Only those women who have drunkards as their husbands know what havoc the drink evil works in homes that once were orderly and peace-giving".

ಇನ್ನೊಂದು ಅವರು ಹೇಳಿರುವುದು ಬಹಳ ಮುಖ್ಯವಾದುದು. ಅದು ಈ ರೀತಿ ಇದೆ:

"If I am appointed a Dictator for one hour for All India, the first thing I would do, would be to close without compensation all the liqour shops, destroy all the toddy palms such as I know them in Gujarat".

ಇಲ್ಲಿ ಮುಂದೆ ಹೇಗೆ ಮಾಡುತ್ತಿದ್ದೆ ಎಂಬುದನ್ನು ವಿವರಿಸಿದ್ದಾರೆ. ಹೀಗೆ ಅವರು ಪ್ರತಿಯೊಂದು ವಿಷಯದಲ್ಲೂ ಕೂಡ ಅಥಾರಿಟೇಟಿವ್ ಆಗಿ ಅವರ ಸಿದ್ಧಾಂತವನ್ನು ಹೊರಗೆಡಹುವರಲ್ಲಿ ಸ್ವಲ್ಪವೂ ಹಿಂತೆಗೆದಿಲ್ಲ. ಇದು ನಮಗೆ ಒಂದು ರೀತಿಯ ಉತ್ಸಾಹ ಮತ್ತು ಶಕ್ತಿಯನ್ನು ಹುಟ್ಟಿಸುತ್ತದೆ. ಕೊನೆಯಲ್ಲಿ ಅವರು ಹೇಳಿದ್ದು ನನ್ನ ಮನಸ್ಸಿನ ಮೇಲೇನು ಪರಿಣಾಮವನ್ನುಂಟುಮಾಡಿತೆಂಬುದನ್ನು ಹೇಳುತ್ತೇನೆ.

1929ನೆಯ ಇಸವಿಯಲ್ಲಿ ಹೀಗೆ ಹೇಳಿದರು:

"I would therefore appeal to you, especially the women, who are concerned with temperance work to take courage in both your hands. I do not ask you to take as gospel truth what I have told you. Test the truth for yourselves and if you find that what I have told you is more than confirmed by your investigations, then I suggest that you will make it your sacred duty to carry on a whirl-wind campaign for total prohibition. The task is difficult only because the rights that have been created through the drink evil belong to the ruling race."

ಹೆಣ್ಣುಮಕ್ಕಳ ಮೇಲೆ ಅವರು ತಮ್ಮ ಸಿದ್ಧಾಂತವನ್ನು ಹೇರಲಿಲ್ಲ. ನಾವು ನಮ್ಮ ಧೈರ್ಯದಿಂದ ಬುದ್ಧಿಯಿಂದ ವಿಮರ್ಶೆಮಾಡಿ ನಮಗೆ ಆದರಲ್ಲಿ ಸಂಪೂರ್ಣ ನಂಬಿಕೆಯಿದ್ದರೆ ಆನುಸರಿಸುಬಹುದೆಂದು ಹೇಳಿದರು. ಸ್ವಾಮೀ, ಈ ಗೌರವಯುತವಾದ ಸಭೆಗೆ ಹೇಳುವುದಾದರೆ, 25 ವರ್ಷಗಳಿಂದ ನಾನು ಹೆಣ್ಣು ಮಕ್ಕಳ ಏಳಿಗೆಗಾಗಿ ದುಡಿದೆ, ಅವರ ಕಷ್ಟಸುಖಗಳನ್ನು ಕಣ್ಣಾರೆ ನೋಡಿ ಬಹಳ ನೊಂದಿದ್ದೇನೆ. ಅನೇಕ ಮುತ್ತೈದೆಯರ ಸಂಸಾರಗಳು ಹಾಳಾಗಿವೆ. ಒಳ್ಳೆಯ ಪ್ರೇಮಪೂರಿತವಾದ ದಾಂಪತ್ಯಜೀವನ ಒಂದು ಚಟಕ್ಕೊಳಗಾಗಿ ಮುರಿದು ಹೋಗಿದೆ. ಅನೇಕ ಹೆಣ್ಣು ಮಕ್ಕಳು ಇವತ್ತಿನದಿನ ಆಶ್ರಯರಹಿತರಾಗಿ ಅನೇಕ ದುಃಖ ಸಂಕಟಗಳಿಗೆ ಈಡಾಗಿದ್ದಾರೆ. ನಮ್ಮ ದೇಶದಲ್ಲಿ ಯಾವ ಹೆಣ್ಣು ಮಕ್ಕಳನ್ನು ಸದಾ ಆದಿಶಕ್ತಿ ಎಂದು ಗೌರವಿಸುತ್ತಿದ್ದೆವು ಅದೇ ದೇಶದಲ್ಲಿ ಇವತ್ತು ಅವರು ಚಟಗಳಿಗೆ ತುತ್ತಾಗಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಇದರಿಂದ ದೇಶವು ಅಧೋಗತಿಗೆ ಬರುತ್ತದೆ, ದೇಶದಲ್ಲಿರತಕ್ಕ ಧರ್ಮ, ನೀತಿ, ಹಿಂದಿನಿಂದ ಬಂದ ಸಂಪ್ರದಾಯ, ಸಂಸ್ಕೃತಿಗಳಿಗೆ ಧಕ್ಕೆ ಬರುತ್ತದೆ ಎಂಬ ನಂಬಿಕೆ ಸಂಪೂರ್ಣವಾಗಿ ನನಗಿರುವಾಗ ಈ ಕೆಟ್ಟ ಚಟಗಳಿಂದ ಮನುಷ್ಯ ಹಾಳಾಗಿ ತನ್ನ ಐಶ್ವರ್ಯವನ್ನೆಲ್ಲಾ ಬರಿದುಮಾಡಿಕೊಂಡು ಶಾಂತಿಯನ್ನು ಕಳೆದುಕೊಳ್ಳುವುದಕ್ಕೆ ಅವಕಾಶಕೊಡುವುದು ಸರಿಯಲ್ಲ. ಇದರಿಂದ ಮುಂದಿನ ಭವಿಷ್ಯ ಪೀಳಿಗೆಯ ಮೇಲೇನು ಪರಿಣಾಮವಾಗುತ್ತದೆಂಬುದನ್ನು ಕೂತ ಯೋಚನೆಮಾಡಿಲ್ಲ. ನಮ್ಮ ದೇಶದ ಮಹತ್ತರ ಸಂಪತ್ತಾದ ನಮ್ಮ ಮಕ್ಕಳ ಏಳಿಗೆಗೆ, ಹೆಣ್ಣುಮಕ್ಕಳ ಶೀಲ, ನಡತೆ, ಧರ್ಮ ಮುಂತಾದುವನ್ನು ಕಾಪಾಡಿಕೊಳ್ಳಬೇಕಾದ್ದು ಅಗತ್ಯ. ಹಿಂದುಳಿದ ಜನರ ಅಭಿವೃದ್ಧಿಗಾಗಿ ಹೋರಾಡುವುದು ಅವಶ್ಯಕ ಎಂದು ಪ್ರತಿಯೊಬ್ಬರೂ ಹೇಳುತ್ತಿರುವಾಗ, ಚಟಕ್ಕೆ ಗುರಿಯಾಗಿರುವ ಹರಿಜನರು, ಗಿರಿಜನರು ಮುಂತಾದವರನ್ನು ಅದರಿಂದ ತಪ್ಪಿಸಿ ಅವರಿಗೆ ಸರಿಯಾದ ವಿದ್ಯೆಯನ್ನು ಕಲಿಸಿ, ಅವರನ್ನು ಯೋಗ್ಯರನ್ನಾಗಿ ಮಾಡಬೇಕಾದ್ದು ನಮ್ಮ ಧರ್ಮ; ಅವರಿಗೆ ವಿದ್ಯಾರ್ಥಿವೇತನ ಮುಂತಾದ ನೆರವನ್ನು ನೀಡಿ ಅವರನ್ನು ಅಭಿವೃದ್ಧಿಗೆ ತರಬೇಕಾದ್ದು ನಮ್ಮ ಕರ್ತವ್ಯ. ಮಹಾತ್ಮ ಗಾಂಧಿಯವರು 50 ವರ್ಷಗಳಿಂದ ತಂದಿರುವ ತತ್ವವನ್ನು ಈ ದಿವಸ ತೆಗೆದುಹಾಕಿ ಸ್ವಲ್ಪಮಟ್ಟಿಗಾದರೂ ಕೂಡ ಅದನ್ನು ಸಡಿಲ ಮಾಡುವು

ದಾದರೆ ನನ್ನಂಥ ವೃದ್ಧೆ. ಜನರ ಕಷ್ಟವನ್ನು ಕಣ್ಣಾರೆ ನೋಡಿರುವ ನಾನು, ಅದರಿಂದುಂಟಾಗುವ ಕಷ್ಟನಷ್ಟ, ಗಳನ್ನು ಅರಿತೂ ಅದರಲ್ಲಿ ಭಾಗಿಯಾಗುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಪಾನನಿರೋಧ ಯಾವ ರೀತಿ ಯಲ್ಲೂ ಸಡಿಲವಾಗಿಲ್ಲ, ಅದನ್ನು ಸ್ಕ್ರ್ಯಾಪ್‌ಮಾಡಿಲ್ಲ, ಬಹಳ ಆತುರಪಟ್ಟು ಮಂತ್ರಿಗಳು ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು ಎಂದು ಕೆಲವರು ಹೇಳುತ್ತಾರೆ. ಸ್ವಾಮಿ, ಸಾಧಾರಣವಾಗಿ ನಾನು ಯಾವ ನಿಂದಾ-ಸ್ತುತಿಗಳಿಗೂ ಜಗ್ಗದೆ ಆಶಾಪಾಶಾಗಳಿಗೂ ಮಾರುಹೋಗದೆ ಯಾವ ಸ್ಥಾನಮಾನಗಳೂ ಶಾಶ್ವತವಲ್ಲವೆಂದು ತಿಳಿದಿರುವ ನಾನು ಈ ಇಳಿ ವಯಸ್ಸಿನಲ್ಲಿ ಏನೇ ಕಷ್ಟಬಂದರೂ ತತ್ವವನ್ನು ಬಿಟ್ಟು ಹೋಗಲು ಸಿದ್ಧವಾಗಿಲ್ಲ, ಯಾರನ್ನು ಎದುರಿಸಬೇಕಾಗಿ ಬಂದರೂ ಚಿಂತೆಯಿಲ್ಲ, ಗಾಂಧೀಜಿಯವರ ತತ್ವಗಳನ್ನು ರಕ್ಷಣೆಮಾಡಲು ನನ್ನ ಕೈಲಾದಷ್ಟು ಹೋರಾಡುತ್ತೇನೆ. ಗೃಹಿಣಿಯಾದವಳು ತನ್ನ ಮಕ್ಕಳ ಪುರೋಭಿವೃದ್ಧಿಗಾಗಿ ಎಲ್ಲವನ್ನೂ ತ್ಯಾಗಮಾಡುವಂತೆ ಇಡೀ ದೇಶದ ಗೌರವ ಮತ್ತು ಹಿತಕ್ಕೆ ಪ್ರತಿಯೊಬ್ಬರೂ ಮುಂದೆ ಬಂದು ತನ್ನ ಕೈಲಾದ ಸೇವೆ ಸಲ್ಲಿಸಬೇಕಾಗಿರುವ ಸಂದರ್ಭದಲ್ಲಿ ಯಾರೂ ಹಿಂಜರಿಯದೆ ಕಷ್ಟಪಟ್ಟು ದುಡಿಯಬೇಕು. ಇಂದು ಗಾಂಧೀಜಿಯವರ ಆಶೀರ್ವಾದದಿಂದ ಈ ದೇಶದ ಪ್ರಧಾನ ಮಂತ್ರಿ, ಸ್ಥಾನವನ್ನು ಒಬ್ಬ ಹೆಣ್ಣುಮಗಳು ಅಲಂಕರಿಸಿದ್ದಾಳೆ. ಅದು ನಮಗೆಲ್ಲಾ ಹೆಮ್ಮೆಯ ವಿಷಯ. ಕೇರಳದಲ್ಲಿ ಅಕ್ಕಿಯಿಲ್ಲವೆಂಬ ಕೂಗಿಗೆ ಸಾಂಕೇತಿಕ ವಾಗಿ ಆಕೆ ಅಕ್ಕಿಯನ್ನು ಉಪಯೋಗಮಾಡುವುದಿಲ್ಲವೆಂದು ನಿರ್ಧರಿಸಿದ್ದಾರೆ. ಅದರಿಂದ ಉಳಿತಾಯವಾಗು ವುದು ಹೆಚ್ಚೇನೂ ಅಲ್ಲದಿದ್ದರೂ ಅದು ಕೇರಳಕ್ಕೆ ಸಾಕಾಗದಿದ್ದರೂ ಆ ರೀತಿಯಲ್ಲಿ ಮಾಡಿರುವುದು ಆಕೆಯ ಉದಾರತನವನ್ನು ಪ್ರತಿಬಿಂಬಿಸುತ್ತದೆ. ಹಾಗೆ ಮಾಡಿದ್ದು ಬಹಳ ಒಳ್ಳೆಯದು, ಅದರಿಂದ ಸತ್ಪರಿಣಾಮ ವಾಗಲಿದೆ. ಇಷ್ಟನ್ನು ಪೀಠಿಕೆಯಾಗಿ ಹೇಳಿ ಪಾನನಿರೋಧ ಕಾನೂನು ನಮ್ಮ ಮೈಸೂರು ದೇಶದಲ್ಲಿ 1961ರಲ್ಲಿ ಜಾರಿಗೆ ಬಂತು, ಆಮೇಲೆ ರೂಲ್ಸನ್ನು ಇತ್ತೀಚೆಗೆ ಮಾಡಿದೆರು. ಮೊದಲು ರೂಲ್ಸ್ ಫ್ರೇಂ ಮಾಡಿರಲಿಲ್ಲ, ಈಗ ಮಾಡಿದ್ದಾರೆ. ನಮ್ಮ ದೇಶಕ್ಕೆ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮುಂತಾದ ಭಾಗ ಗಳೆಲ್ಲಾ ಸೇರಿಕೊಂಡಮೇಲೆ ಪ್ರತಿಯೊಂದು ವಿಚಾರದಲ್ಲೂ ಏಕರೂಪವಾದ ರೂಲ್ಸ್, ಮತ್ತು ಆಕ್ಟ್ ಮಾಡುವುದು ಸಹಜವಾಗಿಯೇ ಇದೆ.

ಈಗ ನಮ್ಮ ರಾಜ್ಯಕ್ಕೆ ಬೊಂಬಾಯಿ, ಹೈದರಾಬಾದು ಕರ್ನಾಟಕ ಪ್ರದೇಶಗಳು ಬಂದಮೇಲೆ ಪ್ರತಿ ಯೊಂದು ವಿಚಾರದಲ್ಲೂ ಆಕ್ಟನ್ನು ಮಾಡುತ್ತಾ ಇದ್ದೇವೆ, ಆ ಬಗ್ಗೆ ರೂಲ್ಸ್‌ನ್ನೂ ಕೂಡ ಮಾಡುತ್ತಾ ಇರುವುದು ಸಹಜವೇ ಆಗಿದೆ. 1961ರಲ್ಲಿ ಪ್ರಪೋಷನ್ ಅಂಡ್ ಎನ್‌ಫೋರ್ಸ್‌ಮೆಂಟ್ ಬಗ್ಗೆ ಜೂನ್‌ನಲ್ಲಿ ಡ್ರಾಫ್ಟ್ ರೂಲ್ಸನ್ನು ತಯಾರು ಮಾಡಿ ಆಮೇಲೆ ಮತ್ತೊಮ್ಮೆ ಡಿಸೆಂಬರ್‌ನಲ್ಲಿ ಯಾವುದನ್ನು ಪ್ರಕಟಣೆ ಮಾಡಲಾಗಿದೆಯೋ ಆ ರೂಲ್ಸ್‌ನ್ನೇ ಇವತ್ತಿನ ದಿವಸ ಜಾರಿಗೆ ಕೊಡಬೇಕೆಂದು ಇದ್ದಾರೆ. ರಿಲ್ಯಾಕ್ಷೇಷನ್ ಹೇಗೆ ಎಂದರೆ—ಅದರ ಲೀಗಲ್ ಇಂಪ್ಲಿಕೇಷನ್ ಹೇಳತಕ್ಕಷ್ಟು ಶಕ್ತಿ ನನಗೆ ಸಾಲದೇ ಇದ್ದರೂ ಕೂಡ ಬರೀ ಕಾಮನ್ ಸೆನ್ಸ್ ದೃಷ್ಟಿಯಿಂದ ನೋಡುವುದಾದರೆ, ಹಿಂದೆ ಇದ್ದದ್ದು ಒಂದು ಪರ್ಮಿಟ್ ಬೇಕಾದರೆ ನೂರು ರೂಪಾಯಿ ಕೊಟ್ಟು ಲೈಸೆನ್ಸ್, ತೆಗೆದುಕೊಳ್ಳಬೇಕಾಗಿತ್ತು, ಅದು 20 ರೂಪಾಯಿಗೆ ಇಳಿತಾಯವಾಯಿತು, ಮತ್ತು ಮೆಡಿಕಲ್ ಬೋರ್ಡಿನಿಂದ ಲಿಡಿಕ್ಸ್ ಪರ್ಮಿಟ್ಸನ್ನು ತೆಗೆದುಕೊಳ್ಳಬೇಕಾಗಿತ್ತು. ಈಗ ಸಾಧಾರಣ ಮೆಡಿಕಲ್ ಪ್ರಾಕ್ಟೀಷನರ್ಸೂ ಕೊಡಬಹುದು, 30 ವರ್ಷದ ಕೆಳಗೆ ಇರತಕ್ಕ ಮಕ್ಕಳಿಗೂ ಕೂಡ ಕೊಡಬಹುದು. ಸ್ವಾಮಿ, ನಮ್ಮ ದೇಶದಲ್ಲಿ ಮುದುಕರು, ಯೌವ್ವನಸ್ಥರು, ಚಿಕ್ಕಪ್ರಾಯದವರೂ ಕೂಡ ಆರೋಗ್ಯ ಸರಿಪಡಿಸಿ ಕೊಳ್ಳಬೇಕಾದರೆ ಕುಡಿತದಿಂದಲೇ ಸರಿಪಡಿಸಿಕೊಳ್ಳಬಹುದು ಎಂಬ ನಂಬಿಕೆ ತಮಗೆ ಇದ್ದರೆ ನಾನು ಏನನ್ನೂ ಹೇಳಲಾರೆ. ಮುದುಕರಿಗೆ ಕುಡಿಯುವುದು ಚಟ, ಕುಡಿಯದೇ ಇರಲಾರರು; ಅವರ ವಿಚಾರ ಬೇಡ; ಏಕೆಂದರೆ, ಅವರಿಗೆ ಇರುವುದೇ ಬಹಳ ಸ್ವಲ್ಪ ದಿವಸಗಳು. ಯಾವುದಾದರೂ ಕುಡಿದುಕೊಂಡು ಹೋಗಲಿ. 30 ವರ್ಷ ದಿಂದ ಕೆಳಗೆ ಇರುವವರು ಕುಡಿಯುವುದು ಬೇಡ. 30 ವರ್ಷದ ಕೆಳಗೆ ಇರುವವರು ಕುಡಿಯುವುದಕ್ಕೆ ಪ್ರಾರಂಭ ಮಾಡಿದರೆ ಇವತ್ತು ಅಮೆರಿಕಾದಲ್ಲಿ ಟೀನ್ ಏಜರ್ಸ್ ಸ್ಥಿತಿ ಏನಾಗಿದೆ ಎಂಬುದನ್ನು ಅವರು ಹೇಳುತ್ತಾ ಇದ್ದಾರೆ ಮತ್ತೆ ಆ ರೋಗ ನಮ್ಮ ದೇಶಕ್ಕೆ ಬರುವುದು ಬೇಡ. ಅಮೆರಿಕಾದಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಕುಡಿಯುತ್ತಾರೆ ಎಂದರೆ ಅವರು ಚಿನ್ನಾಗಿ ತಿನ್ನುತ್ತಾರೆ. ಆದ್ದರಿಂದ ಅವರ ಸ್ಟ್ಯಾಂಡರ್ಡ್ ಆಫ್ ಲೈಫ್ ಏನಿದೆ ಅದನ್ನೆಲ್ಲಾ ಅನುಕರಣ ಮಾಡುವುದಾದರೆ ಇದನ್ನೂ ಅನುಕರಣ ಮಾಡಿ ಅದರಿಂದ ಆಗತಕ್ಕ ದುಷ್ಪರಿಣಾಮ ವನ್ನು ಅನುಭವಿಸಿ ಬುದ್ಧಿ ಕಲಿಯೋಣ ಎಂದರೆ ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲ. ಅನೇಕ ರೀತಿಯ ಸುಧಾರಣೆ ಗಳು ಅಲ್ಲಿ ಆಗಿವೆ. ಇಂತಹ ಚಟಗಳೂ ಕೂಡ ಅಲ್ಲಿ ಹೆಚ್ಚಾಗಿ ಇವೆ. ನಾಳೆ ಹೆಣ್ಣು ಮಕ್ಕಳೂ ಕೂಡ ಕುಡಿಯು ವುದಕ್ಕೆ ಪ್ರಾರಂಭಮಾಡಿದರೆ—ಏನು ಹೆಣ್ಣು ಮಕ್ಕಳು ಕುಡಿಯುತ್ತಾರೆಯೇ ಎಂದು ಹಾಸ್ಯ ಮಾಡಿದವರೂ ಉಂಟು—ಸಿಟಿಗಳಲ್ಲಿ ಕಡಿಮೆ ಇರಬಹುದು ಹಳ್ಳಿಗಾಡಿನಲ್ಲಿ ಹೆಣ್ಣು ಮಕ್ಕಳು ಕುಡಿಯುವುದಕ್ಕೆ ಪ್ರಾರಂಭ ಮಾಡಿದರೆ ನಿಮ್ಮ ಮನೆಯಲ್ಲಿ ಒಂದು ಸಾಮಾನೂ ಇರುವುದಿಲ್ಲ. ಚಟ ಬಂದಾಗ ಹಣ ಇಲ್ಲದೇ ಇದ್ದರೆ ಮನೆಯಲ್ಲಿರುವ ಸಾಮಾನುಗಳನ್ನು ಒತ್ತೆ ಇಟ್ಟು ಹಣ ತಂದು ಕುಡಿಯತಕ್ಕ ಹವ್ಯಾಸಕ್ಕೆ ತೊಡಗುವುದರಲ್ಲಿ ಸಂದೇಹವಿಲ್ಲ, ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲಾರೆ. ಆದ್ದರಿಂದ ರಿಲ್ಯಾಕ್ಷೇಷನ್ ಅನ್ನುವುದು ಈಗ ಏನಾಗಿದೆ ಇದು ಇನ್ನೂ ಸಡಿಲವಾದರೆ ಮುಂದೆ ಇದರ ಪರಿಣಾಮ ಏನಾದೀತು ಎಂಬ ಭೀತಿಯಿಂದ, ಜನಗಳಲ್ಲಿ

(ಶ್ರೀಮತಿ ಯಶೋಧರಾ ದಾಸಪ್ಪ)

ಇದನ್ನು ಹೊರಗೆ ಹೇಳಬೇಕಾದರೆ ಕ್ಯಾಬಿನೆಟ್‌ನಲ್ಲಿದ್ದು ಕೊಂಡು ಸರ್ಕಾರ ಮಾಡತಕ್ಕ ನೀತಿಯನ್ನು ಸರ್ಕಾರದ ಒಳಗೆ ಇದ್ದು ಪ್ರತಿಭಟಿಸುವುದು ಎಂದರೆ ಸಾಧ್ಯವಾಗುವುದಿಲ್ಲ, ಅದು ನ್ಯಾಯವೂ ಆಲ್ಲ. ಟೀಕ್ ಚಿಪ್ ಕಮಿಟಿ ರಿಪೋರ್ಟ್ ಬಂದಾಗ ಅದಕ್ಕೆ ನನ್ನ ಒಂದು ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಇದನ್ನು ಸಬಲ ಮಾಡಿದಾಗ 4ನೇ ತಾರೀಖು ಚೀಫ್ ಮಿನಿಸ್ಟರಿಗೆ ಕಾಗದ ಬರೆದಿದ್ದೇನೆ. 5ನೇ ತಾರೀಖು ಮತ್ತು 17ನೇ ತಾರೀಖು ಕಾಗದ ಬರೆದು ನನ್ನ ಎಲ್ಲಾ ಸಹೋದ್ಯೋಗಿಗಳಿಗೂ ಹಂಚಿದ್ದೇನೆ. ಸರ್ವ ಪ್ರಯತ್ನವನ್ನೂ ನಾನು ಮಾಡಿ, ಎಲ್ಲರ ಮೇಲೂ ಕೂಡ ಏಕ ರೀತಿಯಲ್ಲಿ ಇದರ ಆರ್ಥವನ್ನು ತಿಳಿಯಪಡಿಸುವುದಕ್ಕೆ ಶಕ್ತಿಯಾಲದೇ ಇದ್ದದ್ದರಿಂದ ಹೊರಗೆ ಬರಬೇಕಾಯಿತು. 16ನೇ ತಾರೀಖಿನ ದಿವಸ ನಮ್ಮ ಗೆಜೆಟ್‌ನಲ್ಲಿ ಬಂದು ಆಗ ರಾಜೀನಾಮೆ ಸಲ್ಲಿಸಿದೆ. ಈ ಕಾಗದಗಳಲ್ಲಿ ನನ್ನ ಮನಸ್ಸಿನ ಮೇಲೆ ಆದಂತಹ ಅಭಿಪ್ರಾಯ, ಮತ್ತು ಅವರನ್ನು ಎಷ್ಟು ಬಗೆಯಿಂದ ಅಪೀಲ್ ಮಾಡಿಕೊಳ್ಳಬಹುದೋ ಅಷ್ಟೂ ಮಾಡಿಕೊಂಡು, ಸರ್ವ ಪ್ರಯತ್ನವನ್ನೂ ಮಾಡಿ, ಅದರಲ್ಲಿ ಜಯ ಸಿಕ್ಕದೇ ಹೋದದ್ದರಿಂದ ಹೊರಗೆ ಬಂದು ನನ್ನ ಕೈಲಾಯಿತು ರಚನಾತ್ಮಕ ಕೆಲಸಕಾರ್ಯಗಳನ್ನು ಮಾಡೋಣ ಎಂದು ಹೇಳಿ ಹೊರಗೆ ಬಂದಿದ್ದೇನೆ. ಈ ವಿಷಯಗಳೆಲ್ಲಾ ಬಹಳ ಕಾನ್‌ಸ್ಟ್ರಕ್ಟಿವ್ ಆಗಿ, ನಮ್ಮ ಪಾರ್ಟಿಗೆ ಅನುಗುಣವಾಗಿ ಯಾವ ರೀತಿ ಮಾಡಬೇಕೆಂದು ಹೇಳಿ ಯೋಜನೆಯಾಗಿ, ದೊಡ್ಡದು, ಹಿರಿಯರೆಲ್ಲರ ಅಪ್ಪಣೆಯ ಮೇರೆಗೆ ಇವತ್ತಿನ ದಿವಸ ನಾನು ಆ ರೀತಿಯನ್ನು ಅನುಸರಿಸಿದ್ದೇನೆಯೆಂದು ಹೇಳ ಬಯಸುತ್ತೇನೆ.

ಈ ಸಭೆಯಲ್ಲಿ ಅನೇಕ ಮಹನೀಯರು ಅನೇಕ ರೀತಿಯಲ್ಲಿ ಇಲ್ಲಿ ಕೇಳಿರುವುದೂ ಆಲ್ಲದೇ ಹೊರಗಡೆಯೂ ಸಹ ಜನ ಕೇಳಿದ್ದಾರೆ. ಹೊರಗಿನ ಜನಕ್ಕೆ ಹೊರಗಡೆಯೇ ಉತ್ತರ ಕೊಡುತ್ತೇನೆ. ಈ ಕೆಲಸಗಳನ್ನು ಮಾಡುವಾಗ ರೋಮ್ಯಾ ರೋಲಾ ಅವರು ಒಂದು ವಿಷಯವನ್ನು ಹೇಳಿದ್ದಾರೆ. ನಾಲ್ಕಾರು ಜನ ದೊಡ್ಡ ವ್ಯಕ್ತಿಗಳು ಹೇಳಿದ್ದನ್ನು ಹೇಳಿ ಈ ನನ್ನ ಹೇಳಿಕೆಯನ್ನು ಮುಗಿಸುತ್ತೇನೆ. ರೋಮೈನ್ ರೋಲಾ ಏನು ಹೇಳಿದ್ದಾರೆ ಎಂದರೆ

> " I have repeatedly declared that the worst evil with which the world is afflicted is not the power of the wicked ; it is the weakness of the good."

ಈ ವಿಷಯಗಳನ್ನು ಪ್ರತಿಭಟಿಸಲು ಒಂದು ಬಗೆಯ ಸಂಕೋಚದಿಂದಲೋ ಅಥವಾ ಜನಗಳ ಒತ್ತಾಸೆ ಸಿಕ್ಕುತ್ತದೆಯೋ ಇಲ್ಲವೋ ಎಂಬ ಹೆದರಿಕೆಯಿಂದಲೋ ನಾವು ಸತ್ಯವನ್ನು ಎತ್ತಿ ಹಿಡಿಯುವುದರಲ್ಲಿ ಹಿಂದೆಗೆಯುವಾರದು, ಇದು ಅವರು ಹೇಳಿರತಕ್ಕ ಮಾತು. ಸ್ವಾಮಿ ವಿವೇಕಾನಂದರು ಇಂತಹ ಒಂದು ದೇಶ ಸೇವೆ ಮತ್ತು ಅದರ ಶ್ರದ್ಧಾಭಿವೃದ್ಧಿಯ ಬಗ್ಗೆ ಹೇಳುತ್ತಾ ಇದಕ್ಕೆ ಶ್ರದ್ಧೆ, ಶಕ್ತಿ, ಕ್ಷಾತ್ರೀಯ ಬಲ ಬೇಕು ಎಂದು ಹೇಳಿದ್ದಾರೆ ಮತ್ತು ಇದಕ್ಕೆ ಒಂದು ತೇಜಸ್ಸು ಬೇಕು. ಇಂತಹ ತೇಜಸ್ಸು, ಶಕ್ತಿ, ಸಾಮರ್ಥ್ಯ, ಚೈತನ್ಯ ನಮಗೆ ಬರಬೇಕಾದರೆ ಯಾವುದನ್ನೇ ಆಗಲಿ ಅದನ್ನು ನಮ್ಮ ಮೇಲೆ ಪ್ರಯೋಗ ಮಾಡಿಕೊಂಡು ಅದರಿಂದ ಆಗಬಹುದಾದಂತಹ ಯಾವ್ಯಾವ ಕಷ್ಟಕಾರ್ಪಣ್ಯಗಳು ಬರುತ್ತವೆಯೋ ಅದನ್ನು ಎದುರಿಸತಕ್ಕ ಮನೋಧರ್ಮ ನಮ್ಮಲ್ಲಿ ಬೆಳೆಯಬೇಕು. ಅವಕ್ಕೇ ಗಾಂಧೀಜಿಯವರು ಯಾವಾಗಲೂ " Don't rush to publicity your work must speak itself." ಹೇಳುತ್ತಾ ಇದರು. ಏನು ಮಾಡಿದರೂ ಕೃತಿಯಲ್ಲಿ ಮಾಡಬೇಕು, ಮಾತನಾಡುವುದಕ್ಕೆ ಹೋಗಬೇಡಿ ಎಂದು ಅವರು ಪದೇ ಪದೇ ರಚನಾತ್ಮಕ ಕೆಲಸಗಳನ್ನು ಮಾಡುವಾಗ ಹೇಳುತ್ತಾ ಇದ್ದರು ಕಸ್ತೂರಿಬಾ ಸಂಸ್ಥೆಯಲ್ಲಿ ನಡೆಯುತ್ತಾ ಇರುವ ವ್ಯವಹಾರದಲ್ಲಿ ನೀವೇನು ಮಾಡುತ್ತಾ ಇದ್ದೀರಿ, ಅವರಲ್ಲಿ ಸಂಗ್ರಹವಾದ ಹಣ ಏನು ಮಾಡಿದಿರಿ ಎಂದು ಜನ ನಾನಾ ರೀತಿಯಲ್ಲಿ ದೂಷಣೆ ಮಾಡಿದಾಗ ನಾವು ಗಾಂಧೀಜಿ ಅವರ ಹತ್ತಿರ ಹೋಗಿ ಅಲ್ಲಿ ಯಾವ್ಯಾವ ಕೆಲಸ ಕಾರ್ಯಗಳು ನಡೆದಿವೆ ಎಂಬುದರ ಬಗ್ಗೆ ಆರ್ಟಿಕಲ್ಸ್‌ನ್ನು ಬರೆಯುತ್ತೇವೆ, ಫೋಟೋಗಳನ್ನು ತೆಗೆದು ಪೇಪರ್‌ಗಳಲ್ಲಿ ಪ್ರಕಟಮಾಡಿಸುತ್ತೇವೆ ಎಂದು ಹೇಳಿದಾಗ ಅವರು ಈ ಮಾತನ್ನು ಹೇಳಿದರು.:

> " Don't rush to publicity ; your work must speak itself."

10-00 A.M.

ಸ್ವಾಮಿ, ಸರಕಾರದ ಪಾನನಿರೋಧ ನೀತಿಯ ಪರಿಣಾಮವಾಗಿ ನಾನು ರಾಜೀನಾಮೆ ಕೊಟ್ಟು ಹೊರಗೆ ಬಂದಾಗ್ಗೆ ಅರಸೀಕೆರೆಯಲ್ಲಿ ಹತ್ತು ಲಕ್ಷ ರೂಪಾಯಿ ಆಸ್ತಿ ನಾನು ಮಾಡಿದ್ದೇನೆ, ಮಹಾರಾಜರವರು ನನಗೆ ನಾಲ್ಕು ಎಕರೆ ಜಮೀನು ಕೊಟ್ಟಿದ್ದಾರೆ, ಸುಮ್ಮನೆ ನಾನು ಮನೆಯಲ್ಲಿ ಇರುವುದೂ ಹೊರಗೆ ಕೆಲಸ ಮಾಡುವುದು ಬಿಟ್ಟುಬಿಡಬೇಕು ಎಂದು ಕೆಲವರು ಕಾಗದ ಬರೆದರು. ಅರಸೀಕೆರೆಯಲ್ಲಿರುವ ಈ ಆಸ್ತಿ ನನಗೆ ಸೇರಿದ್ದಲ್ಲ.

ಅದು ಕಸ್ತೂರಬಾ ಟ್ರಸ್ಟಿಗೆ ಸೇರಿದೆ. ಆದರಲ್ಲಿ ಒಂದು ಎಕರೆ ಭೂಮಿಯೊಗಲಿ ಒಂದು ತೆಂಗಿನ ಮರವಾಗಲಿ ನನಗೆ ಸೇರಿಲ್ಲ. ಮಹಾ ಜನರು ಅಲ್ಲಿಗೆ ಬಂದು ನೋಡಬೇಕು. ಈ ಆಸ್ತಿ ಯಾರಿಗೆ ಸೇರಿದೆ ಎಂಬುದು ಮಹಾ ಜನಕ್ಕೆ ನಿಜ ಸಂಗತಿ ಗೊತ್ತಾದರೆ ಅದೊಂದು ಹೆಮ್ಮೆಯ ವಿಷಯ. ನಿಜವಾಗಿಯೂ ಕೆಲಸ ಕಾರ್ಯಗಳ ಬಗ್ಗೆ ಮಾತನಾಡಬೇಕು, ಆದರೆ ನಾವು ಈ ರೀತಿ ಪ್ರಚಾರ ಮಾಡತಕ್ಕದ್ದು ಸರಿಯಲ್ಲ.

ಈಗ ಜನ ತೆರಿಗೆ ವಿಚಾರ ಮಾತನಾಡುತ್ತಾರೆ. ತೆರಿಗೆಗಳ ಮೂಲಕ ಸರಕಾರಕ್ಕೆ ಹಣವಿಲ್ಲದಿದ್ದರೆ ದೇಶದ ಕೆಲಸ ಕಾರ್ಯಗಳನ್ನು ಮಾಡುವುದು ಸರಕಾರಕ್ಕೆ ಕಷ್ಟ ಎಂಬುದನ್ನು ನಾನು ಬಲ್ಲೆ. ಯಾವ ರೀತಿ ತೆರಿಗೆ ಹಾಕಬೇಕು, ಯಾವ ರೀತಿ ಹಣ ವಸೂಲ್ಮಾಡಬೇಕು, ಇದಕ್ಕೆ ಎಷ್ಟು ಖರ್ಚಾಗಬೇಕು, ಇವೆಲ್ಲವೂ ಆಡಳಿತ ವರ್ಗಕ್ಕೆ ಸೇರಿದ್ದು. ಯಾವದೇ ಟ್ಯಾಕ್ಸ್ ಇರಲಿ ಅದನ್ನು ಸರಿಯಾದ ಸಮಯದಲ್ಲಿ ಸರಕಾರಕ್ಕೆ ಒದಗಿಸಿಕೊಡುವದು ಮಹಾಜನರ ಕರ್ತವ್ಯ. ಜನ ಟ್ಯಾಕ್ಸ್ ಕೊಡಲಿ. ಪಾಸಿನರೋಧ ನೀತಿ ಬದಲಾವಣೆಯಿಂದ ಟ್ಯಾಕ್ಸ್ ಕೊಡುವುದು ಕಡಿಮೆಯಾಗುತ್ತದೆ ಎಂದು ತಿಳಿದುಕೊಳ್ಳುವುದು ಖಂಡಿತವಾಗಿ ತಪ್ಪಾಗುತ್ತದೆ. ಪಾಸಿನರೋಧದಿಂದ ಸರಕಾರದ ಖಜಾನೆಗೆ ಬರಬೇಕಾದ ಹಣ ಎಷ್ಟು ಕಡಿಮೆಯಾಗುತ್ತದೆಯೋ ಅದನ್ನು ಕಾಂಪೆನ್ಸೇಟ್ ಮಾಡುವುದಕ್ಕಾಗಿ ಸೇಲ್ಸ್ ಟ್ಯಾಕ್ಸ್ ತೆರಿಗೆ ಹಾಕುವುದನ್ನು ರಾಜಾಜಿಯವರು ಸೂಚಿಸಿದರು ಎಂದು ಕೆಲವರು ಹೇಳುತ್ತಾರೆ. ಪ್ರಾಹಿಬಿಷನ್ ಹೋದರೂ ಕೂಡ ಸೇಲ್ಸ್ ಟ್ಯಾಕ್ಸ್ ಉಳಿಯುತ್ತದೆ. ಆಡಳಿತ ಸೂತ್ರ ಯಾವ ಪಕ್ಷವವರ ಕೈಯಲ್ಲಿ ಇದ್ದರೂ ಜನಸಮುದಾಯದ ಕಲ್ಯಾಣ ಸಾಧನೆ ಮಾಡಬೇಕಾಗುತ್ತದೆ. ಆದುದರಿಂದ ಇವತ್ತಿನ ಪರಿಮಿತಿಯಲ್ಲಿ ಚೌಕಟ್ಟಿನಲ್ಲಿ ಆಡಳಿತ ಸೂತ್ರ ನಡೆಸುವವರು ಯಾವ ರೀತಿ ಕೆಲಸ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಎಷ್ಟು ಆದಾಯ ಇದೆಯೋ ಇದ್ದರಷ್ಟರಲ್ಲಿಯೇ ವೆಚ್ಚವನ್ನು ಸರಿಪಡಿಸಿಕೊಳ್ಳಬೇಕು. ಈ ಮಾತನ್ನು ಪ್ರತಿಯೊಬ್ಬ ಗೃಹಿಣಿಯೂ ಆಡಬಲ್ಲಳು. ಒಬ್ಬ ಮಹಾಕವಿ ಈ ರೀತಿ ಹೇಳಿದ್ದಾನೆ :

ಕರ್ತವ್ಯವೆಂಬುವುದು ನರನು ತೆರಬೇಕಾದ ತೆರಿಗೆ ಕಣಾ
ತೆರದೊಡೆ ಅವಮಾನ ಸಿದ್ಧ, ನೀತಿ ಭ್ರಷ್ಟತೆ ಸಿದ್ಧವಯ್ಯಾ
ಕರ್ತವ್ಯ ಶೂನ್ಯನಾಗು
ಕರ್ತವ್ಯ ಭಾರನಾಗ ಬೇಡ
ಜನನವಾದಂದು ಮೊದಲಾಯಿತೀ ಭಾರ
ತೀರುವುದು ಮರಣದೊಂದಿಗಯ್ಯಾ
ಕರ್ತವ್ಯ ಧರ್ಮದ ಮೇಲೆ ನಿಂತಿದೆ
ಧರ್ಮ ಪ್ರೀತಿಯಿಂದ ಸ್ಫೂರ್ತಿಗೊಂಡಿದೆ

ಆದುದರಿಂದ ಒಂದು ಮಾತಿನಲ್ಲಿ ಹೇಳುವುದಾದರೆ, ಕುಡಿತದಿಂದ ಆರೋಗ್ಯ ಕೆಡುತ್ತದೆ. ಆಧ್ಯಾತ್ಮಿಕ ಉನ್ನತಿಯಾಗುವುದಿಲ್ಲ. ಬೌದ್ಧಿಕ ಬೆಳವಣಿಗೆ ಕೆಟ್ಟು ಹೋಗುತ್ತದೆ. ಇದಲ್ಲದೆ ಆರ್ಥಿಕಸ್ಥಿತಿ ಕೂಡ ಬಹಳ ಕೆಳಮಟ್ಟಕ್ಕೆ ಇಳಿಯುತ್ತದೆ. ಇದರಲ್ಲಿ ಅನೇಕರಿಗೆ ನಂಬಿಕೆ ಇರಬಹುದು ಅಥವಾ ಇಲ್ಲದೇ ಇರಬಹುದು. ನನ್ನ ಪ್ರಚಾರವನ್ನು ಮೊದಲು ನಿಮ್ಮಲ್ಲಿ ಪ್ರಾರಂಭ ಮಾಡುತ್ತೇನೆ. ನಾನು ಕೈಜೋಡಿಸಿ ನಿಮಗೆಲ್ಲರಿಗೂ ಬೇಡಿಕೊಳ್ಳುತ್ತೇನೆ. ಒಂದು ಮನೆಯಲ್ಲಿ ಒಬ್ಬ ಕುಡುಕ ಇದ್ದರೆ, ಅಣ್ಣತಮ್ಮಂದಿರಲ್ಲಿ ಒಬ್ಬನು ಕುಡುಕನಾದರೆ ಮನೆಯವರೆಲ್ಲರೂ ಎಷ್ಟು ಕಷ್ಟಪಡಬೇಕಾಗುತ್ತದೆ ಎಂಬುದು ಆ ತಾಯಿಗೆ ಮಾತ್ರ ಗೊತ್ತು. ಪತಿಸಿತಿಗೆ ಅಸಗುಣವಾಗಿ ನಿಸ್ಸಹಾಯಕರಾದ ಹೆಣ್ಣುಮಕ್ಕಳಿಗೆ ಅದು ಗೊತ್ತು. ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶ ಮುನ್ನಡೆಯುವುದಕ್ಕೆ ಬಿಡಲು ಯಾವ ಹೆಣ್ಣುಮಗಳೂ ತಯಾರು ಇರುವುದಿಲ್ಲ. ನಮ್ಮಲ್ಲಿ ಕುಡಿಯುವುದು ಕೆಲವರಿಗೆ ಫ್ಯಾಷನ್ ಆಗಿದೆ. ನಾಲ್ಕು ಜನ ಸೇರಿದಾಗ ಕುಡಿಯುವುದು ಒಂದು ಪದ್ಧತಿಯಾಗಿದೆ. ಆದರೆ ಅನೇಕ ಮಹನೀಯರು ಇಂಥ ಸಂದರ್ಭದಲ್ಲಿ ಸಹ ಕುಡಿಯದೇ ಇರತಕ್ಕಂಥವರು ಇದ್ದಾರೆ. ಬೇರೆಯವರಿಗೆ ಕುಡಿಸುತ್ತಾರೆ ಆದರೆ ತಾವು ಮಾತ್ರ ಕುಡಿಯುವುದಿಲ್ಲ. ಬಿಜಿನೆಸ್ ಮಾಡತಕ್ಕ ಜನರು ಬೇರೆಯವರಿಗೆ ಕಾಫಿ ಟೀ ಕುಡಿಸುತ್ತಾರೆ ಆದರೆ ತಾವು ಕುಡಿಯದೆ ಎಚ್ಚರಿಕೆಯಿಂದ ಇರುತ್ತಾರೆ. ಕುಡಿದು ಎಚ್ಚರ ತಪ್ಪಿದ್ದಾಗ್ಗೆ ಗುಪ್ತ ಹಾಗು ಸೈನ್ಯದ ರಹಸ್ಯಗಳು ಕೂಡ ಬಹಿರಂಗಪಡಿಸಲ್ಪಟ್ಟಿವೆ. ಕುಡಿತದ ಅಮಲಿನಲ್ಲಿ ಎಂಥ ರಹಸ್ಯವನ್ನಾದರೂ ಹೇಳಿಬಿಡುತ್ತಾರೆ. ಕುಡಿತ ಒಂದು ವಿಷ ಇದ್ದ ಹಾಗೆ ಇದೆ. ಇದೊಂದು ಚಟ ಹವ್ಯಾಸವಾಗಿದೆ ಕಾಫಿ, ಟೀಕುಡಿಯುವವರು ಕುಡಿಯದೇ ಇದ್ದರೆ ಹೇಗೆ ತಲೆ ನೋವು ಬರುತ್ತದೆಯೋ ಹಾಗೆಯೇ ಇದೂ ಒಂದು ಕುಡಿಯುವ ಚಟವಾಗಿದೆ. ಕುಡಿಯುವ ಚಟದ ಬಗ್ಗೆ ಸರ್ವಜ್ಞ ಕವಿಯು ಒಂದು ಪದ್ಯದಲ್ಲಿ ಈರೀತಿ ಹೇಳಿದ್ದಾನೆ.

ಅಡವಿಯನು ಹೊಗಬಹುದು
ಮಡದಿಯ ಬಿಡಬಹುದು
ಬಿಡದೆ ಧ್ಯಾನದಿರಬಹುದು
ವಾಸನೆಯ ಕೊಡಹಲಳವಲ್ಲ ಸರ್ವಜ್ಞ

(ಶ್ರೀಮತಿ ಯಶೋಧರಾ ದಾಸಪ್ಪ)

ಕುಡಿಯುವ ಚಟವನ್ನು ಬಿಡುವುದು ಸಾಧ್ಯವಿಲ್ಲ. ಆದರೂ ಕೂಡ ಇಂಥ ಚಟಗಳನ್ನು ಗೆದ್ದವನೇ ನಿಜವಾದ ಧೀರ. ಅವನೇ ರಾಜ್ಯ ಸೂತ್ರಗಳನ್ನು ಹಿಡಿದು ನಡೆಸಬಲ್ಲ ವೀರ, ಅವನೇ ಮಹಾ ತ್ಯಾಗಿ. ಶಾಂತಿ ದೂತರಾದ ಲಾಲಬಹದ್ದೂರ ಶಾಸ್ತ್ರಿಯವರು ಕೈಕೊಂಡ ಸರಳ ಜೀವನ ಎಲ್ಲರಿಗೂ ಆದರ್ಶವಾಗಿದೆ. ವೀರ ಧೀರರಾಗಿ ತಮ್ಮ ಕರ್ತವ್ಯ ನೆರವೇರಿಸುತ್ತಾ ಅವರು ಕಣ್ಣು ಮುಚ್ಚಿದರು. ಅವರ ಸರಳತೆ ಅವರ ಪ್ರಭಾವ ಎಲ್ಲರಿಗೂ ಆದರ್ಶವಾಗಿದೆ. ಸಾಧ್ವೀಮಣಿಯಾದ ಅವರ ಹೆಂಡತಿಯು ಎಲ್ಲ ಹೆಣ್ಣು ಮಕ್ಕಳ ಮನಸ್ಸಿನಲ್ಲಿ ಅಭಿಮಾನ ಹುಟ್ಟಿಸಿದ್ದಾರೆ. ಸಾಧ್ವೀಮಣಿಯಾದವರು ತಮ್ಮ ಪ್ರಭಾವದಿಂದ ಮನೆಯನ್ನು ಮೇಲಕ್ಕೆ ಎತ್ತಿ ತರುತ್ತಾರೆ ದೇಶವನ್ನು ಉದ್ಧಾರಮಾಡುತ್ತಾರೆ. ಆದುದರಿಂದ ಅವರ ಕೈಯಲ್ಲಿ ಮನೆ ಯಜಮಾನಿಕೆ ಕೊಡುತ್ತೇವೆ. ಮನೆಯನ್ನು ಸರಿಯಾಗಿ ಕಾಪಾಡಿಕೊಂಡು ಬರುತ್ತಾರೆ. ಇವತ್ತಿನ ದಿವಸ ಆಡಳಿತ ಸೂತ್ರ ಇಂಥ ಸಾಧ್ವೀಮಣಿ ಕೈಯಲ್ಲಿ ಇರುವುದರಿಂದ ದೇಶದ ಕಲ್ಯಾಣವಾಗುತ್ತದೆ, ಸಮಾಜ ಕಲ್ಯಾಣವಾಗುತ್ತದೆ. ಇಂದು ನಮ್ಮ ಸಮಾಜ ಅಧೋಗತಿಗೆ ಹೋಗುವುದು ಬೇಡ. ದೇಶದಲ್ಲಿಯ ಹೆಣ್ಣು ಮಕ್ಕಳು ಕಣ್ಣೀರು ಸುರಿಸುವಂತಾದರೆ ಸಮಾಜ ಕಲ್ಯಾಣ ಮಂತ್ರಿಯಾಗಿ ನಾನು ಇರುವುದು ನ್ಯಾಯವಲ್ಲ ಧರ್ಮವಲ್ಲ ಎಂದು ನಾನು ತಿಳಿದುಕೊಂಡು ಈ ಸ್ಥಾನದಿಂದ ಹೊರಗೆ ಬರಲು ತೀರ್ಮಾನ ಮಾಡಿದೆ. ಇದನ್ನು ಬಹಳ ದಿನ ಯೋಚಿಸಿದ್ದೆನೆ. ಆಗಾಗ್ಗೆ ಮದ್ಯ ಪಾನ ನಿರೋಧ ಸಡಲಿಕೆಯ ವರ್ತಮಾನ ಬಂದಾಗ್ಗೆ ನನ್ನ ಮನಸ್ಸಿನಲ್ಲಿ ಉಂಟಾದ ಭಾವನೆಯ ಬಗ್ಗೆ ನನ್ನ ಹಿತಚಿಂತಕರೊಡನೆ ನಾನ ಮಾತನಾಡುತ್ತಿದ್ದೆನು. ಈಗ ಅಂಥ ಸನ್ನಿವೇಶ ಬಂದುದರಿಂದ ಕೊನೆಯ ತೀರ್ಮಾನಕ್ಕೆ ಬಂದೆ. ಜನಗಳ ಮನಃ ಪರಿವರ್ತನೆ ಕೆಲಸ ಮಾಡುವುದಕ್ಕೆ ಸಿದ್ಧಳಾಗಿದ್ದೇನೆ. ಇಷ್ಟು ಮಾತ್ರ ಹೇಳುತ್ತೇನೆ. ಇದುವರೆಗೆ ನಾನು ಮಂತ್ರಿ ಪದವಿಯಲ್ಲಿ ಇರುವಾಗ್ಗೆ ಎಲ್ಲ ರೀತಿಯಿಂದ ಬೆಂಬಲ ಪ್ರೋತ್ಸಾಹ ಕೊಟ್ಟ ನಮ್ಮ ನಾಯಕರಾದ ಮುಖ್ಯ ಮಂತ್ರಿಗಳಿಗೆ ಅಭಿಮಂದನೆಗಳನ್ನು ಸಲ್ಲಿಸುತ್ತೇನೆ. ಅಧಿಕಾರಿ ವರ್ಗದವರು ಕೂಡ ಸರ್ವ ರೀತಿಯಿಂದ ಪ್ರೋತ್ಸಾಹ ಬೆಂಬಲ ಕೊಟ್ಟಿದ್ದಾರೆ. ಆದುದರಿಂದ ಅವರನ್ನು ಕೂಡ ಮಂದಿಸುತ್ತೇನೆ ಮಾನ್ಯ ಮುಖ್ಯ ಮಂತ್ರಿಗಳವರಿಗೆ ಒಂದು ವಿಷಯ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ಸಾವಿರಾರು ಜನರ ಕೂಡ ಸೇರಿಕೊಂಡು ತುರುವನೂರಿನಲ್ಲಿ ಸತ್ಯಾಗ್ರಹ ಮಾಡಿ ಪಾನನಿರೋಧ ಚಳವಳಿಯಲ್ಲಿ ಭಾಗವಹಿಸಿ, ಈಚಲ ಮರಗಳನ್ನು ಕಡಿದು ತುರುಂಗ ವಾಸ ಅನುಭವಿಸಿರುವುದನ್ನು ಅವರ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ಅಂಥವರು ಯಾವುದೋ ಒಂದು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕುಬಿದ್ದು ಈ ಪಾನನಿರೋಧ ಸಡಲಿಕೆಗೆ ಹೇಗೆ ಒಪ್ಪಿದರು ಎಂಬುದು ನನಗೆ ಅರ್ಥವಾಗಿಲ್ಲ.

ಇವತ್ತು ಕೂಡ ಸಂಪೂರ್ಣ ಪಾನನಿರೋದದಲ್ಲಿ ಅವರಿಗೆ ನಂಬಿಕೆ ಇದೆ. ಸಹಿ ಸಂಗ್ರಹಣೆ ಕಾರ್ಯ ಕ್ರಮವನ್ನು ಪ್ರಾರಂಭಮಾಡಿದಾಗ ಮೊದಲು ಅವರ ಸಹಿಯನ್ನು ತೆಗೆದುಕೊಳ್ಳುವ ಸುಪೂರ್ಣ ನಂಬಿಕೆ ನನಗೆ ಇದೆ. ಆದ್ದರಿಂದ ಯಾವ ರೀತಿಯಲ್ಲೂ ಕೂಡ ನಾನು ಹೊರಗೆ ಬಂದಿರತಕ್ಕದ್ದು. ಗಾಂಧಿಜೀಯವರ ತತ್ವಗಳನ್ನು ಅನುಷ್ಠಾನಕ್ಕೆ ತರುವಾಗ ನಾನು ಮಾಡತಕ್ಕಂಥ ಪ್ರಚಾರದಲ್ಲಿ ಯಾವ ಒಂದು ಸತ್ಪ್ರೇರಣೆ ಸನ್ಮಾರ್ಗವಿದೆಯೊ ಅದನ್ನು ಉಜ್ವಲವಾಗಿ ನಡೆಸಿಕೊಂಡು ಹೋಗುತ್ತೇನೆಂದು ಹೇಳುತ್ತೇನೆ. ಅದಕ್ಕೆ, ಬೇರೆ ಬೇರೆ ಅರ್ಥಗಳನ್ನು ಕಲ್ಪಿಸದೆ ನನ್ನ ಸಂಪೂರ್ಣ ಬೆಂಬಲ ಈ ಕಾಂಗ್ರೆಸ್ ಸಂಸ್ಥೆಗೂ ಮತ್ತು ಈ ಸರ್ಕಾರಕ್ಕೂ ಇದೆ. ಅವರಿಗೆ 50 ಲಕ್ಷ ರೂಪಾಯಿಗಳು ಸಡಲಿಕೆ ಬರುವಂತಹ ಹಣವನ್ನು ಯಾವ ಬಗೆಯಲ್ಲಿ ನಾವು ಸಂಪಾದನೆ ಮಾಡಿಕೊಡಬಹುದು ಎಂಬುದು ನನ್ನ ಯೋಚನೆಯಲ್ಲಿದೆ. ಹೆಣ್ಣು ಮಕ್ಕಳನ್ನು ಹಾಗೆ ಕೇಳಿಕೊಳ್ಳುತ್ತೇನೆ. ನಾನು ಈ ದೇಶವನ್ನು ಕಟ್ಟುವುದರಲ್ಲಿ ಮತ್ತು ಅದಕ್ಕೆ ಸ್ವಾತಂತ್ರವನ್ನು ಸಂಪಾದನೆ ಮಾಡುವುದರಲ್ಲಿ ಕೈಹಾಕಿರುವುದರಿಂದ ಇವರಲ್ಲಿ ಘರ್ಷಣೆ, ವೈಮನಸ್ಯ ಅಥವಾ ವಿನಾಶಕಾರಕ ಕಾರ್ಯಕ್ರಮಗಳು ಏನಿವೆಯೋ, ಅವುಗಳನ್ನು ಹಾಕಿಕೊಳ್ಳದೆ, ಕೇವಲ ನಮ್ಮ ಲಾಲ್ ಬಹದ್ದೂರ್ ಶಾಸ್ತ್ರೀಯವರ ಹಾಗೆ, ಅವರು ಪಾಕಿಸ್ತಾನದ ಮನಸ್ಸನ್ನು ಒಲಿಸಿಕೊಂಡು ತನ್ನ ದೇಹವನ್ನು ಈ ದೇಶಕ್ಕೆ ತ್ಯಾಗಮಾಡಿ, ಅದೇ ಅಯೂಬ್ ಖಾನ್ ರವರು ಅವರ ಪಾರ್ಥಿವ ಶರೀರವನ್ನು ಹೊತ್ತುಕೊಂಡು ಹೋಗುವ ಒಂದು ಸುದರ್ಭವನ್ನು ಕಲ್ಪಿಸಿ, ಆ ಪಾಕಿಸ್ತಾನದ ಮೇಲೆ ತನ್ನ ಭೌತಿಕ ಶರೀರವು ಹಾರಿಹೋಗುವಂತೆ ಮಾಡಿ ನಮ್ಮಲ್ಲಿ ಒಂದು ಐಕ್ಯತೆಯನ್ನು ಹುಟ್ಟಿಸಿದರು. ಆದ್ದರಿಂದ ಈ ಮಹಾನುಭಾವರು ಸತ್ತರೂ ಸಹ ಅವರ ಶಾಂತಿಪ್ರಿಯತೆ, ಅವರು ಲೋಕ ಕಲ್ಯಾಣಕ್ಕಾಗಿ ಮಾಡತಕ್ಕಂಥ ಕಾರ್ಯ, ಅವರ ತಪಸ್ಸಿನಿಂದ, ಇವತ್ತು ಮಾಡಿ ತೋರಿಸಿ ಹೋಗಿದ್ದಾರೆ. ಈ ಒಂದು ಒಳ್ಳೆಯ ಸತ್ಕಾರ್ಯ ನಮ್ಮ ಮನಸ್ಸಿನಲ್ಲಿ ಬೇರೂರಿ, ನಾವೆಲ್ಲರೂ ಈ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಈ ನಮ್ಮ ದೇಶವನ್ನು ಸಕಲ ರೀತಿಯಲ್ಲೂ, ಸುಪವ್ರರಿತವನ್ನಾಗಿ ಮಾಡಿ, ಈ ಬಡತನದ ಕಷ್ಟಕಾರ್ಪಣ್ಯಗಳು ನೀಗುವುದಕ್ಕೆ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದು ತಮ್ಮೆಲ್ಲರಲ್ಲೂ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಸಣ್ಣ ವಿಷಯವನ್ನು ಹೇಳಬೇಕಾಗಿದೆ. ಪದೇ ಪದೇ ಈ ಸಭೆಯಲ್ಲಿ ಮತ್ತು ಪತ್ರಿಕೆಗಳಲ್ಲಿ ಅರಣ್ಯಶಾಖೆಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರು ಮತ್ತು ಸಮಾಜ ಕಲ್ಯಾಣಶಾಖೆಯ ಉಪ

ಮಂತ್ರಿಗಳಾದ ಶ್ರೀಮಾನ್ ಪ್ರಭಾಕರ್‌ರವರು ಏತಕ್ಕೋಸ್ಕರ ರಾಜೀನಾಮೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ. ನಾನು ರಾಜೀನಾಮೆ ಕೊಡುವುದಕ್ಕೆ ಮನಸ್ಸು ಮಾಡಿದಾಗ ಅವರಿಬ್ಬರೂ ನನ್ನಲ್ಲಿ ಬಂದು ಈ ವಿಚಾರ ಚರ್ಚೆ ಮಾಡಿದ್ದಾರೆ. ನನ್ನ ಮಕ್ಕಳಿಗೆ ಯಾವರೀತಿ ಬುದ್ಧಿ ಹೇಳುತ್ತಿದ್ದೇನೆಯೋ, ಅದೇ ರೀತಿ ಅವರುಗಳಿಗೂ ಬುದ್ಧಿ ಹೇಳುವುದಕ್ಕೆ ಹಿಂಜರಿಯಲಿಲ್ಲ. ಇಷ್ಟು ದಿನವೂ ಯಾರಿಗೋಸ್ಕರವಾಗಿ ಕೆಲಸಮಾಡುತ್ತಿದ್ದೆನೋ, ಯಾರ ಕಲ್ಯಾಣಕ್ಕೋಸ್ಕರವಾಗಿ ಕೆಲಸ ಮಾಡುತ್ತಿದ್ದೆನೋ, ಅದೇ ರೀತಿ ಇನ್ನು ಮುಂದೆಯೂ ಕೂಡ ಅವರ ಕಲ್ಯಾಣ ನೋಡಿಕೊಳ್ಳತಕ್ಕಂಥದು ನನ್ನ ಕರ್ತವ್ಯ. ಯಾವ ಹರಿಜನರಿಗೋಸ್ಕರವಾಗಿ ಸ್ಥಾನಗಳು ಬೇಕು, ಕೆಲಸಗಳು ಬೇಕು, ಅವರ ಮಕ್ಕಳಿಗೆ ವಿದ್ಯೆಬೇಕು, ಅವರ ಆರ್ಥಿಕ ಸಂಪತ್ತು ಬೆಳೆಯಬೇಕು ಎಂದು ನಾನು ಹೇಳುತ್ತಾ ಇದ್ದು, ಈಗ ಮಂತ್ರಿಮಂಡಲದಿಂದ ಹೊರಗೆ ಬಂದೆನೆಂದು ಉದ್ರಿಕ್ತನಾಗಿ ನನಗೆ ನೀವು ಬೆಂಬಲ ಕೊಡಿ ಎಂದು ಕೇಳುವ ಬಯಕೆ ನನ್ನಲ್ಲಿ ಇಲ್ಲ. ನೀವು ಇಂಥ ಸಣ್ಣ ಕಾರ್ಯಕ್ಕೆ ಪಾನನಿರೋಧದ ಸಡಲಿಕೆಗೋಸ್ಕರವಾಗಿ ರಾಜೀನಾಮೆ ಕೊಟ್ಟು ಹೊರಗೆ ಬರಬೇಕಾದ್ದು ಅಗತ್ಯವಿಲ್ಲವೆಂದು ಹೇಳಿದೆ. ಅವರುಗಳು ಅವರ ಸ್ಥಾನಗಳಲ್ಲಿಯೇ ಇರಲಿ. ಪಾನನಿರೋಧವನ್ನು ಸಂಪೂರ್ಣವಾಗಿ ರದ್ದು ಮಾಡಿ, ಹರಿಜನರ ಮನೆ ಮನೆ, ಕೇರಿ ಕೇರಿಯಲ್ಲಿ ಹೊಡ ಮಾತುಮಾಡಿ ಸುಧಾರ್ ಬಂದಾಗ ನೋಡೋಣ. ಈಗ ನೀವು ನಿಮ್ಮ ನಿಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಿ ಎಂದು, ನನ್ನ ಮಕ್ಕಳಿಗೆ ಎಷ್ಟರಮಟ್ಟಿಗೆ ಪುತ್ರವಾತ್ಸಲ್ಯದಿಂದ ಹೇಳುತ್ತೇನೋ ಅಷ್ಟರಮಟ್ಟಿಗೆ ಅವರಿಗೂ ಹೇಳಿದೆ. ಒಂದು ಮಾತೃಪ್ರೇಮದಿಂದ ಅವರುಗಳು ನೀವು ರಾಜೀನಾಮೆ ಕೊಟ್ಟು ಹೊರಗೆ ಬಂದಮೇಲೆ ನಾವುಗಳು ಮಂತ್ರಿಮಂಡಲದಲ್ಲಿರುವುದಕ್ಕೆ ಇಷ್ಟವಿಲ್ಲ, ತಾವೂ ಸಹ ರಾಜೀನಾಮೆ ಕೊಟ್ಟು ಹೊರಗೆ ಬರುತ್ತೇವೆಂದು ಹೇಳಿದರು. ಆದಕಾರಣ ಮಾನ್ಯ ಸದಸ್ಯರುಗಳು ಅವರುಗಳ ವಿಚಾರದಲ್ಲಿ ಪದೇ ಪದೇ ಕಾರಣ ಕೇಳುವುದು ಪ್ರಯೋಜನವಿಲ್ಲ. ಅವರುಗಳ ಅಭಿವೃದ್ಧಿಗೆ ಮತ್ತು ಅವರ ಜನಾಂಗದ ಅಭಿವೃದ್ಧಿಗಾಗಿ ನಾನು ಶ್ರಮಿಸುತ್ತೇನೆ. ಅವರಲ್ಲೂ ಸಹ ಮಾತೃಭೂಮಿಯ ಪ್ರೇಮವಿದೆ. ಅವರೇ ಅಲ್ಲದೆ ಇನ್ನೂ ಅನೇಕ ಹರಿಜನರೂ ಮತ್ತು ಅನೇಕ ಎಮ್. ಎಲ್. ಎ. ಗಳು ಕೂಡ ಪಾನನಿರೋಧ ಸಡಲಿಕೆ ವಿಚಾರದಲ್ಲಿ, ಅದರ ವಿರುದ್ಧ ಹೋರಾಡಲು ಸಿದ್ಧರಾಗಿದ್ದೇವೆಂದು ನನ್ನ ಕೈಯಲ್ಲಿ ಕಾಗದ ಬರೆದು ಕೊಟ್ಟಿದ್ದಾರೆ. ಈ ಒಂದು ಚಳುವಳಿಯಲ್ಲಿ ಯಾವ ಒಂದು ರಾಜಕೀಯವೂ ಇಲ್ಲ. ಇದು ತಾತ್ವಿಕವಾಗಿ ಮಾಡತಕ್ಕಂಥ ಒಂದು ಕೆಲಸವಾದ್ದರಿಂದ ದೇಶದಲ್ಲಿ ಏನೂ ಒಂದು ಅಂದೋಳನವನ್ನು ಎಬ್ಬಿಸಬೇಕಾದ್ದು ಇಲ್ಲ. ಹೊರಗಿರುವ ನಮ್ಮ ಜನರು ಸಹ ನಮ್ಮ ಕೈಲಾದ ಕೆಲಸ ಮಾಡುವುದಾಗಿ ಹೇಳಿದ್ದಾರೆ. ಇನ್ನುಮೇಲಾದರೂ ಕೂಡ ಅವರಿಬ್ಬರೂ ಕೂಡ ರಾಜೀನಾಮೆ ಕೊಟ್ಟು ಹೊರಬರಬೇಕೆಂದು ಹೇಳುವುದನು ಬಿಡಿ. ಅವರದ್ದು ಏನೂ ಅಪರಾಧವಿಲ್ಲ. ಅಪರಾಧ ನನ್ನದೆ. ನಾನೇ ಅವರನ್ನು ರಾಜೀನಾಮೆ ಕೊಡಬೇಡಿ ಎಂದು ಹೇಳಿದೆ. ನನಗೆ ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟ ನಮ್ಮ ಸ್ಪೀಕರ್ ಅವರಿಗೆ ವಂದಿಸಿ, ನೀವು ಇನ್ನೇನಾದರೂ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಬೇಕೆಂದು ಇದ್ದರೆ, ಪ್ರಚಾರ ಕಾರ್ಯದಲ್ಲಿ, ಪ್ರೊಹಿಬಿಷನ್ ವಿಚಾರದಲ್ಲಿ ಸಂಪೂರ್ಣ ನಂಬಿಕೆ ಇರುವಂಥವರು ಸೇರಿಕೊಂಡು ಬೆಂಬಲ ಕೊಡಬಹುದು.

---

## Calling attention to a matter of Public Importance.

*Re : The Hunger Strike of the Students of the Veterinary College, (Hebbal) Bangalore.*

SRI K. LAKKAPPA (Hebbur).—I call the attention of the Minister for Revenue to the hunger strike of the students of the Veterinary College, Bangalore.

SRI M. V. KRISHNAPPA (Minister for Revenue).—The students of the Mysore Veterinary College have submitted a Memorandum to Government. Details of each of their demands are noted hereunder :—

(1) The pay scale should be raised equal to the pay scale of Veterinarians in other forward States :—